2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 105/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಿ ರವಿಶಂಕರ್ | ಪಿಡಬ್ಲೂ -10 |
| ತಂದೆಯ ಹೆಸರು | - | ದೇವಿರಪ್ಪ | ಸಿಡಬ್ಲೂ -16 |
| ವಯಸ್ಸು | - | 48 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ದಂದೂರು | |

ದಿನಾಂಕಃ 13-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 2 ನೇ ಆರೋಪಿ ಗೊತ್ತು, ಆಕೆ ನಮ್ಮ ಊರಾದ ದಂದೂರು ಗ್ರಾಮದವಳು. ಉಳಿದ ಆರೋಪಿತರು ಗೊತ್ತಿಲ್ಲ. ಫ್ರಾಸಾ.1 ಗೊತ್ತು, ಅವರು ನಮ್ಮ ಊರಿನವರು. ಮೃತ ಲತಾ ಗೊತ್ತು. ಸಹ ಪಂಚನಾದ ಫ್ರಾಸಾ.9 ರವರು ಗೊತ್ತು, ಆತನು ನಮ್ಮ ಊರಿನಲ್ಲಿ ವಾಸವಾಗಿದ್ದನು.
2. ಸಾಕ್ಷಿಯು ಈಗಾಗಲೇ ನಿಪಿ.12 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.12(ಸಿ) ಎಂದು ಗುರುತಿಸಲಾಯಿತು.
3. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಿಪಿ.12 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎಂದು ಹೇಳಲಾದ ನೋಟೀಸಾಗಿದ್ದು ಅದನ್ನು ಈಗಾಗಲೇ ನಿಪಿ.35 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.35(ಬಿ) ಎಂದು ಗುರುತಿಸಲಾಯಿತು.

4. ಸದರಿ ಸಹಿಗಳನ್ನು ಈಗ್ಗೆ 4 ವರ್ಷಗಳ ಹಿಂದೆ ತರೀಕೆರೆ ಡಿ ವೈ ಎಸ್ ಪಿ ಕಚೇರಿಯಲ್ಲಿ ಮಾಡಿದ್ದೇನೆ. ಆ ದಿನ ಪೊಲೀಸರು ನನ್ನನ್ನು, ಫ್ರಾಸಾ.9 ಚೇತನ್ ಮತ್ತು ಫ್ರಾಸಾ.1 ಗಿರೀಶ್ ರವರನ್ನು ಮಹಜರ್ ಗೆಂದು ಕರೆಸಿದ್ದರು. ನಾವು ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 9.30 ಗಂಟೆಯಾಗಿತ್ತು. ನಾವು ಅಲ್ಲಿಗೆ ಹೋದ ಕೂಡಲೇ ಪೊಲೀಸರು ನಮಗೆ ನೋಟೀಸನ್ನು ಕೊಟ್ಟರು. ಮೃತ ಲತಾರವರಿಗೆ ಸಂಬಂಧಿಸಿದ ನೋಟ್ ಪುಸ್ತಕವೊಂದನ್ನು ಫ್ರಾಸಾ.1 ಗಿರೀಶ್ ರವರು ಆ ದಿನ ಡಿ ವೈ ಎಸ್ ಪಿ ಕಚೇರಿಗೆ ತಂದಿದ್ದರು. ಅದು ಲತಾರವರು ಕಾಲೇಜಿಗೆ ಹೋಗುವಾಗ ಆಕೆ ಬಳಸುತ್ತಿದ್ದ ಒಂದು ಲಾಂಗ್ ನೋಟ್ ಪುಸ್ತಕ ಎಂದು ಮತ್ತು ಅದರಲ್ಲಿರುವ ಬರವಣಿಗೆ ಅವರ ಮಗಳು ಲತಾಳದ್ದು ಎಂದು ಹೇಳಿ ಫ್ರಾಸಾ.1 ರವರು ಸದರಿ ನೋಟ್ ಪುಸ್ತಕವನ್ನು ಪೊಲೀಸರಿಗೆ ಕೊಟ್ಟರು. ಅದನ್ನು ಪೊಲೀಸರು ನಮ್ಮ ಸಮಕ್ಷಮ ಮಹಜರ್ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡರು. ಸದರಿ ನೋಟ್ ಪುಸ್ತಕವನ್ನು ನಾನು ನೋಡಿದ್ದೇನೆ. ಅದರಲ್ಲಿ ಅಂದಾಜು 55 ಪುಟಗಳು ಇದ್ದವು. ಸದರಿ ಪುಸ್ತಕದ ಮೊದಲನೇ ಪುಟದಲ್ಲಿ ಲತಾಳ ಹೆಸರು ಇತ್ತು. ಲತಾಳ ಡೆತ್ ನೋಟಿನಲ್ಲಿದ್ದ ಬರವಣಿಗೆಯನ್ನು ಪರಿಶೀಲಿಸಲು ಸದರಿ ಪುಸ್ತಕವನ್ನು ಲ್ಯಾಬಿಗೆ ಕಳುಹಿಸಲು ಪೊಲೀಸರು ತೆಗೆದುಕೊಂಡರು. ಸದರಿ ನೋಟ್ ಪುಸ್ತಕವನ್ನು ನೋಡಿದರೆ ಗುರುತಿಸುತ್ತೇನೆ.

5. ಸಾಕ್ಷಿಯು ಈಗಾಗಲೇ ನಿಪಿ.22 ಎಂದು ಗುರುತಿಸಲ್ಪಟ್ಟಿರುವ ಲಾಂಗ್ ನೋಟ್ ಪುಸ್ತಕವನ್ನು ನೋಡಿ ಗುರುತಿಸಿ ಆ ದಿನ ಮೇಲೆ ಹೇಳಿದಂತೆ ಫ್ರಾಸಾ.1 ರವರು ಪೊಲೀಸರಿಗೆ ನಮ್ಮ ಸಮಕ್ಷಮ ನೀಡಿದ ನೋಟ್ ಪುಸ್ತಕ ಅದೇ ಎಂದು ನುಡಿದಿರುತ್ತಾರೆ. ಸದರಿ ನೋಟ್ ಪುಸ್ತಕದ ಮೊದಲನೇ ಮತ್ತು ಕೊನೆಯ ಪುಟಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.22(ಇ) ಮತ್ತು ನಿಪಿ.22(ಎಫ್) ಎಂದು ಗುರುತಿಸಲಾಯಿತು. ಸದರಿ ನೋಟ್ ಪುಸ್ತಕಕ್ಕೆ ಮತ್ತು ಮಹಜರ್ ಗೆ ಫ್ರಾಸಾ.9 ಮತ್ತು ಫ್ರಾಸಾ.1 ರವರು ಸಹಿ ಮಾಡಿದ್ದಾರೆ. ಪೊಲೀಸರು ಆ ಬಗ್ಗೆ ಬೆಳಿಗ್ಗೆ 9.30 ಗಂಟೆಯಿಂದ 11.30 ಗಂಟೆಯವರೆಗೆ ಮಹಜರ್ ಮಾಡಿಕೊಂಡರು. ಆ ದಿನ ಫ್ರಾಸಾ.1 ರವರು ಇನ್ನೂ ಕೆಲವು ದಾಖಲೆಗಳನ್ನು ಪೊಲೀಸರಿಗೆ ಕೊಟ್ಟರು. ಆದರೆ ಅವು ಯಾವುವು ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ.

6. ಸಾಕ್ಷಿಯು ಈಗಾಗಲೇ ನಿಪಿ.13 ಎಂದು ಗುರುತಿಸಲ್ಪಟ್ಟಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಆ ದಿನ ಪೊಲೀಸರು ಮಹಜರ್ ಮಾಡಿಕೊಳ್ಳುವ ಸಮಯದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ನನ್ನೊಂದಿಗೆ ಫ್ರಾಸಾ.9 ಮತ್ತು ಫ್ರಾಸಾ.1 ಮತ್ತು ಪೊಲೀಸರು ಇರುವುದಾಗಿ ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು

ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

7. ನಿಪಿ.12 ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಫ್ರಾಸಾ.1 ರವರು ಮೃತೆ ಲತಾ ಮತ್ತು 1 ನೇ ಆರೋಪಿಯ ಮದುವೆ ಸಮಯದಲ್ಲಿ ತೆಗೆಯಲಾಗಿದ್ದ ನಿಪಿ.14 ರಿಂದ ನಿಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನೂ ಸಹ ನಿಮ್ಮ ಸಮಕ್ಷಮ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ಕೆಲವು ದಾಖಲೆಗಳನ್ನು ಕೊಟ್ಟರು ಆದರೆ ನನಗೆ ಈಗ ನೆನಪಾಗುತ್ತಿಲ್ಲ ಎನ್ನುತ್ತಾರೆ.

8. ಫ್ರಾಸಾ.1 ರವರು ಆ ದಿನ ನಿಮ್ಮ ಸಮಕ್ಷಮ ನಿಪಿ.14 ರಿಂದ ನಿಪಿ.17 ಫೋಟೋಗಳನ್ನು ಪೊಲೀಸರಿಗೆ ಹಾಜರುಪಡಿಸಿದ್ದರೂ ಸಹ ಈಗ ನೆನಪಾಗುತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿತರ ಪರವಾಗಿಃ

9. ನಾನು ನಮ್ಮ ಗ್ರಾಮದ ಮುಖಂಡನಲ್ಲ ಮತ್ತು ನಮ್ಮ ಗ್ರಾಮ ಪಂಚಾಯ್ತಿಯಲ್ಲಿ ಯಾವುದೇ ಹುದ್ದೆಯನ್ನು ಹೊಂದಿಲ್ಲ. ನಿಪಿ.22 ನೋಟ್ ಪುಸ್ತಕವನ್ನು ಫ್ರಾಸಾ.1 ರವರು ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.22 ನೋಟ್ ಪುಸ್ತಕದಲ್ಲಿ ಲತಾಳ ಹೆಸರನ್ನು ಹೊರತುಪಡಿಸಿ ಬೇರೆ ಏನೆಲ್ಲಾ ಬರವಣಿಗೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ.

ಪಂಚನಾಮೆಯ ಸಮಯದಲ್ಲಿ ನಾನು ಮತ್ತು ಫ್ರಾಸಾ.9 ರವರು ಪೊಲೀಸರಿಗೆ ಏನನ್ನೂ ಹೇಳಿ ಬರೆಸಿಲ್ಲ ಪೊಲೀಸರೇ ಬರೆದುಕೊಂಡಿದ್ದಾರೆ. ನಿಪಿ.13 ಫೋಟೋವನ್ನು ಯಾರು ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಫ್ರಾಸಾ.1 ರವರು ಚಿಕ್ಕಂದಿನಿಂದಲೂ ನನಗೆ ಪರಿಚಯ. ಫ್ರಾಸಾ.1 ರವರು ಕರೆದ ಮೇರೆಗೆ ನೀವು ಪೊಲೀಸ್ ಠಾಣೆಗೆ ಹೋಗಿದ್ದೀರಿ ಎಂದರೆ ಸರಿ. ನಿಪಿ.12 ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನಿಮಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ನನಗೆ ಮರೆತು ಹೋಗಿದೆ ಎನ್ನುತ್ತಾರೆ. ನಿಮ್ಮ ಸಮಕ್ಷಮ ಫ್ರಾಸಾ.1 ರವರು ನಿಪಿ.22 ನೋಟ್ ಪುಸ್ತಕವನ್ನು ಹಾಜರುಪಡಿಸಿದ್ದಾಗಿ ಮತ್ತು ಅದನ್ನು ಪೊಲೀಸರು ಲ್ಯಾಬಿಗೆ ಕಳುಹಿಸುವ ಸಲುವಾಗಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.